**ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ,**
**ಐವಾನ್–ಎ–ಶಾಹಿ ಬಡಾವಣೆ ಕಲಬುರಗಿ**

ಸಂಖ್ಯೆ: ಸಿ1(1)ಆಡಳಿತ/ಪವ್ಯ/ಬಡ್ತಿ/136/2022–23 ದಿನಾಂಕ: 16/02/2024

**ಜ್ಞಾಪನ**

ವಿಷಯ: ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳಿಗೆ, ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನಿರಾಕರಿಸಿರುವ ಕುರಿತು.

ಉಲ್ಲೇಖ: 1. ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡುವಳಿಗಳು.
2. ಈ ಕಛೇರಿ ಸಮ ಸಂಖ್ಯೆ ಜ್ಞಾಪನ ದಿನಾಂಕ: 03/02/2024.
3. ದಿನಾಂಕ: 16/02/2024ರಂದು ನಡೆದ ಸ್ಥಳ ಆಯ್ಕೆ ಕೌನ್ಸಿಲಿಂಗ.
4. ಶ್ರೀ ಹೆಚ್.ಪಿ.ಪಾರ್ಥಸಾರಥಿ, ಅಧೀಕ್ಷಕರು, ಇವರ ಮನವಿ ದಿನಾಂಕ: 16/02/2024.

>><><><><<

**ಭಾಗ – 1**

ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳಿಗೆ ವಿಭಾಗದಲ್ಲಿ ಖಾಲಿ ಇರುವ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಲು ಉಲ್ಲೇಖ (1)ರ ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ, ಈ ಕೆಳಕಂಡ ಸಿಬ್ಬಂದಿಗಳು ತಮ್ಮ ಸ್ವ–ಇಚ್ಛೆಯಿಂದ ಬಡ್ತಿಯನ್ನು ನಿರಾಕರಿಸಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಅರ್ಜಿಯನ್ನು ಪರಿಗಣಿಸಲಾಗಿದೆ.

**ಸ್ಥಳೀಯ ವೃಂದ :–**

| **ಕ್ರ.ಸಂ** | **ಜೇಷ್ಠತಾ ಸಂಖ್ಯೆ** | **ಹೆಸರು/ ಹುದ್ದೆ/ ಕಛೇರಿ ವಿಳಾಸ** |
|---|---|---|
| 1 | 109 | ಶ್ರೀ ಮಿನಾಜುದ್ದೀನ್, ಅಧೀಕ್ಷಕರು,<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕೊಪ್ಪಳ ಜಿ: ಕೊಪ್ಪಳ |
| 2 | 126 | ಶ್ರೀ ಜಗದೀಶಸ್ವಾಮಿ, ಅಧೀಕ್ಷಕರು,<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೂಡ್ಲಿಗಿ ಜಿ: ವಿಜಯನಗರ |

**ಭಾಗ – 2**

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ, ಉಲ್ಲೇಖ (2)ರ ಈ ಕಛೇರಿ ಜ್ಞಾಪನದನ್ವಯ ಶ್ರೀ ಹೆಚ್.ಪಿ.ಪಾರ್ಥಸಾರಥಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕುರುಗೋಡು ಜಿ: ಬಳ್ಳಾರಿ ಇವರಿಗೆ ಮುಂಬಡ್ತಿ ಮೂಲಕ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸುವ ಹಿನ್ನಲೆಯಲ್ಲಿ ದಿನಾಂಕ: 16/02/2024 ರಂದು ಕೌನ್ಸಿಲಿಂಗ್ ನಿಗಧಿಪಡಿಸಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ದಿನಾಂಕ: 16/02/2024ರಂದು ನಡೆದ ಸ್ಥಳ ಆಯ್ಕೆ ಕೌನ್ಸಿಲಿಂಗ್‌ನಲ್ಲಿ ಶ್ರೀ ಹೆಚ್.ಪಿ.ಪಾರ್ಥಸಾರಥಿ, ಅಧೀಕ್ಷಕರು, ಇವರು ಹಾಜರಾಗಿ ತಮ್ಮ ಸ್ವ–ಇಚ್ಛೆಯಿಂದ ಬಡ್ತಿಯನ್ನು ನಿರಾಕರಿಸಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಅರ್ಜಿಯನ್ನು ಪರಿಗಣಿಸಲಾಗಿದೆ.

ಮುಂದುವರೆದು, ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿರುವಂತೆ, ಸದರಿ 03 ಸಿಬ್ಬಂದಿಯವರು ಮುಂಬಡ್ತಿಯನ್ನು ನಿರಾಕರಿಸಿದ ಬಗ್ಗೆ ಶ್ರೀಯುತರ ಮೂಲ ಸೇವಾ ಪುಸ್ತಕದಲ್ಲಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ ನಿಯಮ 4(ಎ) ರನ್ವಯ ಬಡ್ತಿಯನ್ನು ಬಿಟ್ಟುಕೊಡಲು ಆತನು ಅನುಮತಿ ಕೋರಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅಥವಾ ಬಡ್ತಿಗಾಗಿ ಪರಿಗಣಿಸಲಾಗುವ ನಿಕಟ ತರುವಾಯದ ದಿನಾಂಕದವರೆಗೆ ಇವುಗಳಲ್ಲಿ ಯಾವುದು ನಂತರದ್ದೋ ಅಲ್ಲಿಯವರೆಗೆ ಆತನನ್ನು ಬಡ್ತಿಗೆ ಅರ್ಹನಿರುವುದಿಲ್ಲವೆಂದು ಮೂಲ ಸೇವಾ ಪುಸ್ತಕದಲ್ಲಿ ದಾಖಲಿಸಿ, ಉದ್ಧೃತ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಸಂಬಂಧಿಸಿದ ಕಛೇರಿಯ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

Digitally Signed by Dr.
Akash S
Date: 16-02-2024 18:39:44
Reason: Approved

**(ಡಾ: ಆಕಾಶ್ .ಎಸ್, ಭಾ.ಆ.ಸೇ.)**
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1.
2. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ಸಂಬಂಧಪಟ್ಟ ಕಛೇರಿ ಮುಖ್ಯಸ್ಥರುಗಳಿಗೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ಸಂಬಂಧಿಸಿದ ನೌಕರರಿಗೆ.
6. ಈ ಕಛೇರಿಯ ಇ–ಆಡಳಿತ ಘಟಕಕ್ಕೆ ನೀಡುತ್ತಾ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ತಿಳಿಸಲಾಗಿದೆ.
7. ಕಛೇರಿ ಕಡತಕ್ಕೆ.